# ಸಂಪಾದಕೀಯ

ಪ್ರಾಚೀನ ಸಂಸ್ಕೃತಿ, ನಾಗರಿಕತೆಯ ವಿಕಾಸದ ಕುರಿತು ಅವಲೋಕನ ಮಾಡಿದಾಗ ಮನುಷ್ಯ ಒಬ್ಬ ಸಂಘಜೀವಿಯಾಗಿ ಬದುಕುತ್ತಾ ಬಂದಿದ್ದಾನೆ. ತತ್ವಜ್ಞಾನಿ ಅರಿಸ್ಟಾಟಲ್ ಹೇಳುವಂತೆ "ಮನುಷ್ಯ ಒಬ್ಬ ಸಮಾಜ ಜೀವಿ ಮತ್ತು ರಾಜಕೀಯ ಜೀವಿಯಾಗಿದ್ದಾನೆ." ರಾಜ್ಯವನ್ನು, ಸಮಾಜವನ್ನು ಮುನ್ನಡೆಸುವ ಪರಿಕಲ್ಪನೆಯಾಗಿ ಸಕಾರಾತ್ಮಕ ಆಯಾಮವನ್ನು ಮೂಲದಲ್ಲಿ ಹೊಂದಿದ್ದ ರಾಜಕೀಯ ಎನ್ನುವ ಪರಿಭಾಷೆಯು ಕಾಲಕ್ರಮೇಣ ಮನುಷ್ಯನ ಸ್ವಾರ್ಥ ಆಲೋಚನೆಗಳ ಸುಳಿಯಲ್ಲಿ ಸಿಕ್ಕು ನಕಾರಾತ್ಮಕ ಪರಿಕಲ್ಪನೆಯಾಗಿ ಬದಲಾಗುತ್ತ ಬಂದಿದೆ ಎಂಬುದು ನಮಗೆಲ್ಲರಿಗೂ ತಿಳಿದಿರುವ ಸಂಗತಿ. ಸಾಮಾಜಿಕತೆ, ಸಾಮರಸ್ಯಗಳು ಮನುಷ್ಯನ ವಿಕಾಸದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂಬುದು ನಿರ್ವಿವಾದ.

ಮನುಷ್ಯನ ಜೀವನದಲ್ಲಿ ಸಾಮರಸ್ಯ, ಸೌಹಾರ್ದತೆಯ ವಿಚಾರಧಾರೆಗಳನ್ನು ಮೂಡಿಸುವಲ್ಲಿ ಭಾಷೆ, ಭಾಷೆಯ ಮೂಲಕ ಸಾಹಿತ್ಯ ಯಾವಾಗಲೂ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ.

ಇದಂ ಅಂಧತಮಂ ಕೃತ್ಸ್ನಂ ಜಾಯೇತ್ ಭುವನತ್ರಯಂ ।

ಯದಿ ಶಬ್ದಾಹ್ವಯಂ ಜ್ಯೋತಿರಾನ್ ಸಂಸಾರಾನ್ ನ ದೀಪ್ಯತೆ ॥

ಎಂಬ ಕಾವ್ಯ ಮೀಮಾಂಸಕ ದಂಡಿಯ ವಿಚಾರದಂತೆ ಭಾಷೆ ಎನ್ನುವ ಜ್ಯೋತಿ ಬೆಳಗದಿದ್ದಲ್ಲಿ ಮೂರು ಲೋಕಗಳೆಲ್ಲ ಅಂಧಕಾರದಲ್ಲಿ ಮುಳುಗಿರುತ್ತಿದ್ದವು. ಭಾಷೆಯ ಮೂಲಕ ಮನುಷ್ಯ ಇತರ ಪ್ರಾಣಿಗಳಿಗಿಂತ ಭಿನ್ನನಾಗಿ ನಿಂತಿದ್ದಾನೆ. ಈ ಹಿನ್ನೆಲೆಯಲ್ಲಿ ಭಾಷೆ, ಭಾಷೆಯ ಮೂಲಕ ಸಾಹಿತ್ಯ ಮನುಷ್ಯನನ್ನು ಸಂಸ್ಕಾರಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ ಎಂಬುದು ವೇದ್ಯವಾಗುತ್ತದೆ.

"ಇವನಾರವ ಇವನಾರವನೆಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ" ಎಂಬ ಬಸವಣ್ಣನ ವಿಶ್ವ ಮಾನವ ಪರಿಕಲ್ಪನೆಯ ವಿಚಾರ,

ಮೊಲೆ ಮುಡಿ ಬಂದಡೆ ಹೆಣ್ಣೆಂಬರು,

ಮೀಸೆ ಕಾಸೆ ಬಂದಡೆ ಗಂಡೆಂಬರು

ಉಭಯದ ಜ್ಞಾನ ಹೆಣ್ಣೋ ಗಂಡೋ ನಾಸ್ತಿನಾಥ ? ಎಂಬ ಸ್ತ್ರೀ ಪುರುಷ ಸಮಾನತೆಯನ್ನು ಸಾರಿ ಹೇಳುವ ಗೊಗ್ಗವ್ವೆಯ ವಚನದಲ್ಲಿನ ವೈಚಾರಿಕ ಪ್ರಶ್ನೆ ಸಂವೇದನಶೀಲ ಮನಸ್ಸುಗಳನ್ನು ಮಿಡಿಯುತ್ತದೆ. ಆಧುನಿಕ ಸಂದರ್ಭದಲ್ಲಿಯೂ ಪ್ರಜಾಪ್ರಭುತ್ವದ ಆಶಯಗಳನ್ನು ಸಾಕಾರಗೊಳಿಸಲು ನಾವೆಲ್ಲ ಹೆಣಗಾಡುತ್ತಿರುವ ಸಂದರ್ಭದಲ್ಲಿ ವಚನ ಸಾಹಿತ್ಯ,ದಾಸ ಸಾಹಿತ್ಯವನ್ನೊಳಗೊಂಡಂತೆ ಜೀವಪರ ವಿಚಾರಧಾರೆಗೆ ಮಿಡಿದಿರುವ ಎಲ್ಲ ಚಿಂತಕರ ವಿಚಾರಧಾರೆಗಳು ನಮಗೆ ಪ್ರೇರಣಾದಾಯಿಯಾಗಿ ನಿಲ್ಲುತ್ತವೆ.

"ಅನುಕರ್ಷ" ತ್ರೈಮಾಸಿಕವು ಈಗಾಗಲೇ ತಮಗೆಲ್ಲ ತಿಳಿದಿರುವಂತೆ ಅಲಯನ್ಸ್ ವಿಶ್ವವಿದ್ಯಾಲಯದ ಭಾಷೆ ಹಾಗೂ ಸಾಹಿತ್ಯ ವಿಭಾಗದಿಂದ ಪ್ರಕಟಗೊಳ್ಳುತ್ತಿರುವ ಬಹುಭಾಷಿಕ ತ್ರೈಮಾಸಿಕ ಪತ್ರಿಕೆಯಾಗಿದ್ದು, ಕಲೆ, ಸಾಹಿತ್ಯ,

ಸಾಂಸ್ಕೃತಿಕ ಅಧ್ಯಯನ, ಸಮಾಜ ವಿಜ್ಞಾನ ಮೊದಲಾದ ಕ್ಷೇತ್ರಗಳಿಗೆ ಸಂಬಂಧಿಸಿದ ಸಂಶೋಧನಾ ಬರಹಗಳು,ವಿಮರ್ಶಾತ್ಮಕ ಲೇಖನಗಳ ಜೊತೆಗೆ ಕಥೆ, ಕವಿತೆಗಳಂತಹ ಸೃಜನಶೀಲ ಸಾಹಿತ್ಯ ಪ್ರಕಾರಗಳಿಗೂ ಸಹ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಪ್ರಸ್ತುತ ಸಂಚಿಕೆಯು ಕಥೆ, ಕವಿತೆ, ವಿಮರ್ಶಾತ್ಮಕ ಬರಹಗಳನ್ನೊಳಗೊಂಡಂತೆ ಸೃಜನ ಮತ್ತು ಸೃಜನೇತರ ಎರಡೂ ಪ್ರಕಾರಗಳ ಸಂಯೋಜನೆಯಿಂದ ಕೂಡಿದ್ದು ವೈವಿಧ್ಯಮಯ ವಿಚಾರಧಾರೆಗಳ ಅಭಿವ್ಯಕ್ತಿಯನ್ನು ಇಲ್ಲಿ ಕಾಣಬಹುದಾಗಿದೆ.

ಇಲ್ಲಿಯ ಬರಹಗಳನ್ನು ಸಹೃದಯಿ ಸಾಹಿತ್ಯ ಬಂಧುಗಳಾದ ತಾವು ಓದಿ ಪ್ರತಿಕ್ರಿಯಿಸಬೇಕೆಂಬುದು ನಮ್ಮ ಬಳಗದ ವಿನಮ್ರ ನಿವೇದನೆ. ತಮ್ಮ ರಚನಾತ್ಮಕ ಸಲಹೆ- ಸೂಚನೆಗಳಿಗೆ ಸದಾ ಸ್ವಾಗತ.

ಧನ್ಯವಾದಗಳೊಂದಿಗೆ,

ಡಾ.ವಿವೇಕಾನಂದ ಸಜ್ಜನ